ಗಮನ ಸೆಳೆಯುವ ಸೂಚನೆಗಳು

ವಿಷಯ:- (ಅ) ಬೆಂಗಳೂರಿನ ಅವಲಹಳ್ಳಿಯ ಸರ್ವೆ ನಂಬರ್ 16:1ರ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ವಿಶ್ವಭಾರತಿ ಹೌಸಿಂಗ್ ಕೋ-ಆಪರೇಟೀವ್. ಸೊಸೈಟಿಯವರು ಲೈಔಟ್ ಮಾಡಿರುವುದು

ಶ್ರೀ ಎಂ.ಶ್ರೀನಿವಾಸ (ಉತ್ತರಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನ ಅವಲಹಳ್ಳಿಯ ಸರ್ವೆ ನಂಬರ್ 16:1ರ 19 ಎಕರೆ 20 ಗುಂಟೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ವಿಶ್ವಭಾರತಿ ಹೌಸಿಂಗ್ ಕೋ-ಆಪರೇಟೀವ ಸೊಸೈಟಿಯವರು ಲೇಔಟ್ ಮಾಡಿ ಮಾರಿರುವುದರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ರಮೇಶ್ ಸಿ ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಉಪಾಧ್ಯಕ್ಷರೆ,

ವಿಧಾನ ಸಭಾ ಸದಸ್ಯರಾದ ಶ್ರೀ ಎಮ್. ಶ್ರೀನಿವಾಸ ಇವರು ನಿಯಮ 72 ರಡಿಯಲ್ಲಿ ಕಳುಹಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಹೇಳಿಕೆ.

ಸರ್ವೆನಂಬರ್ 16:1 ರಲ್ಲಿ ಒಟ್ಟು 5-05 ಎಕರೆ ಜಮೀನಿದ್ದು, ಅದರ ಪೈಕಿ ಒಂದು ಎಕರೆ ಜಮೀನು ಬೋರಯ್ಯ ಎಂಬುವವರಿಗೆ ದರಖಾಸ್ತಿನಲ್ಲಿ 1977-78ರಲ್ಲಿ ಮಂಜೂರಾಗಿ 16:1 ಬಿ ಎಂಬುದಾಗಿ ದುರಸ್ತಾಗಿರುತ್ತದೆ. ಉಳಿಕೆ 16:1 ಬಿ, 4 ಎಕರೆ 5 ಗುಂಟೆ ಜಮೀನಿನ ಪೈಕಿ 3 ಎಕರೆ 11 ಗುಂಟೆ ಪ್ರದೇಶದಲ್ಲಿ ಬಿ.ಎ.ಓ. ಕಛೇರಿಯಿಂದ ಉಚಿತ ನಿವೇಶನಗಳನ್ನು ನಿರ್ಮಿಸಿ ಕಸ್ತೂರಿ ಬಾ ನಗರ ಎಂಬುದಾಗಿ ಮನೆಗಳನ್ನು ನಿರ್ಮಾಣ ಮಾಡಿಕೊಂಡು ವಾಸವಾಗಿರುತ್ತಾರೆ. ಉಳಿಕೆ 0-34 ಗುಂಟೆ ಪ್ರದೇಶದಲ್ಲಿ ವಿಶ್ವಭಾರತಿ ಹೌಸ್ ಬಿಲ್ಡಿಂಗ್ ಕೋ ಆಪರೇಟೀವ್ ಸೊಸೈಟಿಯವರು 0-10 ಗುಂಟೆಯಲ್ಲಿ ಅನಧಿಕೃತವಾಗಿ ಧಾರ್ ರಸ್ತೆ ವನಿರ್ಮಾಣ ಮಾಡಿರುತ್ತಾರೆ. ಇದಲ್ಲದೆ 0-02 ಗುಂಟೆ ಪ್ರದೇಶದಲ್ಲಿ ಅನಧಿಕೃತ ಕಟ್ಟಡ ಸುಮಾರು 7-8 ವರ್ಷಗಳ ಹಿಂದೆಯೇ ನಿರ್ಮಾಣವಾಗಿರುತ್ತದೆ. ಉಳಿಕೆ 0-22 ಗಂಟೆ ಜಮೀನು ಖಾಲಿ ಇದ್ದು ಸದರಿ ಗೃಹ ನಿರ್ಮಾಣ ಸಹಕಾರ ಸಂಘದವರು ಮತ್ತು ಬೋರಯ್ಯ ಎಂಬುವವರು ಮಾರಾಟ ಮಾಡಿರುತ್ತಾರೆ ಎಂಬುದಾಗಿ ತಿಳಿದು ಬಂದಿರುತ್ತದೆ. ಈಗ ಹಾಲಿ ಜಾಗದಲ್ಲಿ ತನಿಖೆ ಮಾಡಲಾಗಿ 60 40 ಪ್ರದೇಶದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ವಾಗುತ್ತಿದ್ದು ಕೆಲಸವನ್ನು ನಿಲ್ಲಿಸಲಾಗಿದೆ. ಹಾಗೂ ಕಾನೂನಿನಂತೆ ನೋಟೀಸನ್ನು ಜಾರಿ ಮಾಡಿ ಕ್ರಮ ತೆಗೆದುಕೊಳ್ಳಲಾಗಿದೆ. ಆರ್.ಟಿ.ಸಿ. ದಾಖಲೆಯಂತೆ ಸಿ.ಐ.ಟಿ.ಬಿ. ಎಂಬುದಾಗಿ 1974-75ರಿಂದ ನಮೂದಾಗಿದೆ. ಆದೇಶವಾಗಿರುವ ಬಗ್ಗೆ ದಾಖಲೆ ಇರುವುದಿಲ್ಲ.

ಅವಲಹಳ್ಳಿ ಗ್ರಾಮದ ಸರ್ವೆ ನಂಬರ್ 16:1ಕ್ಕೆ ಹೊಂದಿಕೊಂಡಂತೆ ಸರ್ವೆ ನಂ:17 ಇದ್ದು, ಇದರ ಒಟ್ಟು ವಿಸ್ತೀರ್ಣ 19 ಎಕರೆ 19 ಗುಂಟೆ ಜಮೀನಾಗಿರುತ್ತದೆ. ಇದರ ಪೈಕಿ 4 ಎಕರೆ ಜಮೀನು ಪಟೇಲ್ ಚಿಕ್ಕಹನುಮಯ್ಯ ಅವರಿಗೆ ಹಂಗಾಮಿ ಸಾಗುವಳಿ ಮೂಲಕ ಮಂಜೂರಾಗಿರುತ್ತದೆ. ಇದು ಮತ್ತು ಸರ್ಕಾರಿ ಜಮೀನು ಒಟ್ಟು 6 ಎಕರೆ 13 ಗುಂಟೆ ಜಮೀನನ್ನು ಉಚಿತ ನಿವೇಶನ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದಲ್ಲೂ ಮಾಡಿಕೊಟ್ಟಿರುತ್ತಾರೆ.

2 ಎಕರೆ 30 ಗುಂಟೆ ಸ್ಮಶಾನವಿರುತ್ತದೆ. 9 ಎಕರೆ 4 ಗುಂಟೆ ಕಸ್ತೂರಿಬಾನಗರ ಎಂಬುದಾಗಿ ಉಚಿತ ನಿವೇಶನಗಳನ್ನು ಬಿ.ಡಿ.ಓ. ಕಛೇರಿಯಿಂದ 1977-78ನೇ ಸಾಲಿನಲ್ಲಿ ನೀಡಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ. ಉಳಿಕೆ 0-30 ಗುಂಟೆ ಜಮೀನು ಖಾಲಿ ಇರುತ್ತದೆ. ಅದಲ್ಲದೇ, 0-22 ಗುಂಟೆ ಜಮೀನು ವಿಶ್ವಭಾರತಿ ಗೃಹ ನಿರ್ಮಾನ ಸಹಕಾರ ಸಂಘದವರು ಮಾರಾಟ ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಇದರಲ್ಲಿ 0-02 ಗುಂಟೆ ಪ್ರದೇಶದಲ್ಲಿ ಈಗಾಗಲೇ ಅನಧಿಕೃತ ಮನೆ ಸುಮಾರು 8-10 ವರ್ಷಗಳ ಹಿಂದೆ ಬಂದಿರುತ್ತದೆ. ಉಳಿಕೆ ಜಮೀನು ಖಾಲಿ ಇದೆ. ಅನಧಿಕೃತ ಕಟ್ಟಡದಾರರಿಗೆ ನೋಟೀಸನ್ನು ನೀಡಲಾಗಿದೆ.

ಎಂ.ಆರ್. 1:91-92ರಂತೆ ಸರ್ವೆ ನಂ: 17 ರಲ್ಲಿ ಇರುವ ಪೂರಾ ವಿಸ್ತೀರ್ಣ 19-19 ಎಕರೆ ಪ್ರದೇಶ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಡಲಾಗಿದೆ. ಜಮಿನ್ನನ್ನು ಸೊಸೈಟಿಯವರು ಮಾರಾಟವನ್ನು ಮಾಡುತ್ತಿದ್ದಾರೆಂದು ಕಂಡುಬಂತು. ಆದರೆ ಇವತ್ತು ಒಂದು ರೀತಿಯಲ್ಲಿ ವರದಿಯನ್ನು ಕೊಟ್ಟಿದ್ದೀರಿ. ಬೇಕಾದರೆ ಬನ್ನಿ ತೋರಿಸುತ್ತೇನೆ. 19 ಎಕರೆ 20 ಗುಂಟೆ ಇದು ಸುಮಾರು 50 ಕೋಟಿ ರೂಪಾಯಿ ಬೆಳೆ ಬಾಳುವಂತಹ ಜಾಗ. ಇವತ್ತೂ ಸಹ ಆ ಜಾಗಗಳಲ್ಲಿ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಮತ್ತೆ ಏಕೆ ಸುಳ್ಳು ವರದಿಯನ್ನು ಕೊಡುವುದು? ಒಂದು ಸಲ ಒಂದು ರೀತಿಯ ವರದಿಯನ್ನು ಕೊಡುವುದು ಮತ್ತೊಂದು ಸಾರಿ ಮತ್ತೊಂದು ರೀತಿಯಲ್ಲಿ ವರದಿಯನ್ನು ಕೊಡುವುದು. ಮಾನ್ಯ ಉಪಾಧ್ಯಕ್ಷರೆ, ಇದು ಸರ್ಕಾರಿ ಭೂಮಿಯನ್ನು ಮಾರಾಟ ಮಾಡುತ್ತಿರುವುದು. ಕನ್‌ವರ್ಶನ್ ಭೂಮಿ, ಅವರ ಸ್ವಂತ ಜಮೀನು, ಚಿಕ್ಕಮುನಿಯಪ್ಪನವರ ಹತ್ತಿರ ತೆಗೆದುಕೊಂಡಿರತ್ಕಂತಹ ಜಮೀನಿನ ವಿಚಾರವಾಗಿ ನಾನು ಇಲ್ಲಿ ಹೇಳುತ್ತಿಲ್ಲ. ಆಮೇಲೆ ರೈತರ ಜಮೀನನ್ನು ಅಸಿಷನ್ ಮಾಡಿಕೊಂಡಿರುವುದು ಅಂಥದ್ದನ್ನು ಹೇಳುತ್ತಿಲ್ಲ. ಅಥವಾ ಮತ್ತೊಬ್ಬರ ಜಮೀನನ್ನು ಹೇಳುತ್ತಿಲ್ಲ. ಕಸ್ತೂರಿ ಬಾ ಎಂಬ ಸ್ಲಮ್ ಆ ಭಾಗದಲ್ಲಿ ಇರುವುದೂ ಸಹ ಗೊತ್ತು. ವಿಶ್ವಭಾರತಿ ಹೌಸಿಂಗ್ ಬೋರ್ಡ್‌ನವರಿಗೆ ಕೇವಲ ಒಂದು ಸ್ಟೇಜ್ ಮಾತ್ರ ಅಪ್ರೂವಲ್ ಆಗಿರುವಂಥದ್ದು. ಒಂದು ಸ್ಟೇಜ್ ಎಂದರೆ 10-15 ಎಕರೆ ಇರಬಹುದು. ಆದರೆ ಅವರು ಮಾಡಿರುವುದು ಎಷ್ಟು ಎಂದರೆ 40 ಎಕರೆಗಳು. 40 ಎಕರೆ ಭೂಮಿಯನ್ನು ಮಾರಲು ಯಾರ ಪರ್ಮಿಷನ್ ತೆಗೆದುಕೊಂಡರು? ಅದಕ್ಕೆ ಒಂದು ಬಿ.ಡಿ.ಎ. ಪರ್ಮಿಷನ್ ಇಲ್ಲ, ಬಿ.ಡಿ.ಎ. ಪ್ಲಾನ್ ಅಪ್ರೂವಲ್ ಸಹ ಆಗಿಲ್ಲ. ಎರಡು ವರ್ಷದಿಂದ ನಾನು ಸರ್ಕಾರದ ಜಮೀನನ್ನು ಮಾಡುತ್ತಿದ್ದಾರೆಂದು ಹೇಳುತ್ತಿದ್ದರೆ ಒಂದೊಂದು ವರ್ಷದಲ್ಲಿ ಒಂದೊಂದು ರೀತಿಯಲ್ಲಿ ವರದಿಯನ್ನು ಕೊಟ್ಟರೆ ಹೇಗೆ? ಸರ್ವೆ ನಂಬರ್ ಸಹ ಇದೆ ಅದನ್ನೂ ಸಹ ಕೊಡುತ್ತೇನೆ. 16:1 ಒಟ್ಟು 19 ಎಕರೆ 20 ಗುಂಟೆ. ಹಿಂದೆ ಶ್ರೀ ಆರ್.ಎಲ್. ಜಾಲಪ್ಪನವರು ಕಂದಾಯ ಸಚಿವರಾಗಿದ್ದಾಗ 6ಎಕರೆ, 5ಎಕರೆ, 3ಎಕರೆ, 3ಎಕರೆ, 2ಎಕರೆ ಚಿಲ್ಲರೆ ಇದು ಕರಾಚಿ 'ಎ' ಎಂದು ರೆಕಾರ್ಡ್ ಮಾಡಿಕೊಂಡಿದ್ದಾರೆ. 19 ಚಿಲ್ಲರೆ ಎಕರೆ ಭೂಮಿಯನ್ನು ವಿಶ್ವಭಾರತಿಯವರು ಒತ್ತುವರಿ ಮಾಡಿದ್ದಾರೆಂದು ರೆಕಾರ್ಡ್ ಮಾಡಿಕೊಂಡಿದ್ದಾರೆ. ಅದನ್ನು ಸಹ ತೋರಿಸಿದ್ದಾರೆ. ಅವರ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಒಂದು ಪೊಲೀಸ್ ಸ್ಕ್ವಾಡ್ ಅನ್ನುತಯಾರು ಮಾಡಿದರು ಇದನ್ನು ಇದುವರೆಗೂ ನಿಲ್ಲಿಸಿಲ್ಲ ಮಾಡುತ್ತಿದ್ದಾರೆ.

ಶ್ರೀ ರಮೇಶ್ ಸಿ ಜಿಗಜಿಣಗಿ (ಕಂದಾಯ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಅತ್ಯಂತ ಗಂಭೀರವಾದಂತಹ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಸುಮಾರು ಸರ್ಕಾರದ 20 ಎಕರೆ ಜಮೀನನ್ನು ಯಾರೋ ಒಬ್ಬ

ಶ್ರೀ ಎಂ.ಶ್ರೀನಿವಾಸ (ಉತ್ತರಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ಹಿಂದೆ ಶ್ರೀ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಜಾಲಪ್ಪನವರು ಕಂದಾಯ ಸಚಿವರಾಗಿದ್ದರು ಮತ್ತು ಬಿ.ಡಿ.ಎ. ಸಚಿವರು ರೋಷನ್ ಬೇಗರವರು ಇದ್ದಾಗ ನಾನು ಸ್ಥಳ ಪರಿಶೀಲನೆಯನ್ನು ಮಾಡಿದ್ದೆ. ಆ ಜಾಗದಲ್ಲಿ ವಿಶ್ವ ಭಾರತಿಯವರಿಗೆ ಕೊಟ್ಟಿರತಕ್ಕಂಥದ್ದು ಒಂದೇ ಒಂದು ಸ್ಪೇಜ್. ಮೊದಲನೇ ಹಂತವನ್ನು ಮಾತ್ರ ಅವರು ಪ್ಲಾನ್ ಅಪ್ರೂವಲ್ ಮಾಡಿದ್ದು. ಇದರ ಬಗ್ಗೆ ನಿಮ್ಮ ಸ್ಪೇಷಲ್ ಡಿ.ಸಿ. ರಮೇಶ್ ಎಂದು ಇದ್ದರು ಅವರು ಒಂದು ವರದಿಯನ್ನು ತೆಗೆದುಕೊಂಡು ಅದನ್ನು ಕಂಪ್ಯೂಟರ್ ರೆಕಾರ್ಡ್ ಮಾಡಿಸಿ ಅದನ್ನು ನನಗೆ ತೋರಿಸಿದ್ದಾರೆ. 19 ಎಕರೆ 28 ಗುಂಟೆ ಜಮೀನನ್ನು ವಿಶ್ವಭಾರತಿ ಕೋ-ಅಪರೇಟೀವ್ ಹೌಸಿಂಗ್ ಬೋರ್ಡ್‌ನವರು ಮಾರುತ್ತಿದ್ದಾರೆ. ಮಾರಿ ರಿಜಿಸ್ಟರ್ ಆಗುತ್ತಿದೆ. ರಿಜಿಸ್ಟಾರ್ ಖಾಲಿ ಇದ್ದ ಜಾಗದಲ್ಲಿ ಸುಮಾರು ಐದು ಹಂತಸ್ತಿನ ಮಹಡಿಗಳನ್ನು ಕಟ್ಟುವಾಗ ನೇರವಾಗಿ ಬಿ.ಡಿ.ಎ. ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದೆ ಅದಕೋಸ್ಕರವಾಗಿ ಆಗಿನ ಮುಖ್ಯ ಮಂತ್ರಿಯಾಗಿದ್ದ ಶ್ರೀ ಹೆಚ್.ಡಿ.ದೇವೇಗೌಡರು ಅದನ್ನು ತಡೆಯಲು ಒಂದು ಪೊಲೀಸ್ ಪಹಕಿಯನ್ನು ಹಾಕಿ ಇದನ್ನು ತಡೆಯಾಕಬೇಕು ಇಲ್ಲಿ ಕೋಟ್ಯಾಂತರ ರೂಪಾಯಿ ಕಬಳಿಸಿದ್ದಾನೆ ಎನ್ನುವಂತಹ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ನಾಳೆನೇ ಸಾಧ್ಯವಾದರೆ ನನ್ನ ಅಧಿಕಾರ ಜೊತೆಯಲ್ಲಿ ಸ್ಥಳ ಪರಿಶೀಲನೆಯನ್ನು ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಅವರು ಹೇಳಿದ್ದು ನಿಮಗೆ ಇದುವರೆಗೂ ಸಹ ಗೊತ್ತಾಗಿರಲಿಲ್ಲವೇ?

ಶ್ರೀ ರಮೇಶ್ ಸಿ ಜಿಗಜಿಣಗಿ:- ಮಾನ್ಯ ಉಪಾಧ್ಯಕ್ಷರೆ, ನನ್ನ ಗಮನಕ್ಕೆ ಇವತ್ತಿನವರೆಗೂ ಕೂಡ ಬಂದಿರಲಿಲ್ಲ. ಮಾನ್ಯ ಶ್ರೀ ಶ್ರೀನಿವಾಸರವರು ಏನು ಗಮನಕ್ಕೆ ತಂದಿದ್ದಾರೆ ಅವರು ತಂದ ಮೇಲೆನೆ ನನಗೆ ಗೊತ್ತಾಗಿರುವುದು. ನಾಳೆ ಅಥವಾ ನಾಳಿದ್ದು ನಾನೇ ಅಧಿಕಾರಿಗಳ ಜೊತೆಗೆ ಹೋಗಿ ಸ್ಥಳ ಪರಿಶೀಲನೆ ಮಾಡಿ, ಹಿಂದಿನ ಮಂತ್ರಿಗಳು ಏನು ಮಾಡಿದ್ದಾರೆ, ಏನು ಬರೆದಿದ್ದಾರೆ ಎಲ್ಲವನ್ನೂ ನೋಡಿಕೊಂಡು ನಿರ್ಧಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಯಾರ ಹಂಗೂ ಸಹ ನಮ್ಮ ಮೇಲೆ ಇರುವುದಿಲ್ಲ. ಅದರ ಬಗ್ಗೆ ಸಂದೇಶ ಬೇಡ. ನಾನು ಖುದ್ದಾಗಿ ಸ್ಥಳ ಪರಿಶೀಲನೆಯನ್ನು ಮಾಡುತ್ತೇನೆ.

ಶ್ರೀ ಎಂ. ಶ್ರೀನಿವಾಸ:- ಸಂಬಂಧಪಟ್ಟವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಏಕೆ ಕ್ರಮವನ್ನು ತೆಗೆದುಕೊಳ್ಳುತ್ತಾರೆ? 30 ಎಕರೆ ಜಮೀನನ್ನು ಇದು ಬಹಳ ದೊಡ್ಡ ಸಮಸ್ಯೆ

ಉಪಾಧ್ಯಕ್ಷರು:- ಅವರು ಸ್ಪಷ್ಟವಾಗಿ ಸ್ಥಳ ಪರಿಶೀಲನೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಕ್ರಮವನ್ನೂ ಸಹ ತೆಗೆದುಕೊಳ್ಳುತ್ತೇನೆಂದು ಹೇಳದ್ದಾರೆ. ಮತ್ತೇನು?

ಶ್ರೀ ಎಂ.ಶ್ರೀನಿವಾಸ:– ಯಾವುದೋ ಒಂದು ನೊಣವನ್ನು ಹೊಡೆಯುವುದಕ್ಕೆ ಅರ್ಧ ಗಂಟೆ ಮಾಡುತ್ತಾರೆ. ನೂರಾರು ಕೋಟಿ ರೂಪಾಯಿಗಳ ಬಗ್ಗೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು:– ಅವರು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟರೂ ಸಹಿತ ನಿಮಗೆ ಸಮಾಧಾನ ಇಲ್ಲ ಎಂದರೆ ಹೇಗೆ?

ಶ್ರೀ ಎಂ. ಶ್ರೀನಿವಾಸ್:– ಇದೇ ರೀತಿ 30 ಎಕರೆ ಜಮೀನನ್ನು 35 ಲಕ್ಷ ರೂಪಾಯಿಗಳನ್ನು ಕೊಟ್ಟು ಯಾವನೋ ಪ್ರೈವೇಟಿನವನ್ನು ತೆಗೆದುಕೊಂಡಿದ್ದು ಅದನ್ನು ಮತ್ತೆ ವಾಪಸ್ಸು ಮಾಡಿಕೊಂಡಿದ್ದಾರೆ.

ಶ್ರೀ ರಮೇಶ್ ಸಿ ಜಿಗಜಿಣಗಿ:– ಮಾನ್ಯ ಉಪಾಧ್ಯಕ್ಷರೆ, ಅಕ್ರಮವಾಗಿದ್ದ 250 ಎಕರೆ ಜಮೀನನ್ನು ಬಿಡಿಸಿಕೊಂಡಿದ್ದೇವೆ. ಅದನ್ನು ಸರ್ಕಾರದ ಪರವಾಗಿ ಹರಾಜು ಮಾಡಬೇಕೆಂದಿದ್ದೇವೆ. ಆದುದರಿಂದ ದಯವಿಟ್ಟು ಅದರ ಬಗ್ಗೆ ಹೆಚ್ಚು ಪ್ರಸ್ತಾಪವನ್ನು ಮಾಡುವುದು ಬೇಡ. ನಾನು ಈಗಾಗಲೇ ಹೇಳಿದ್ದೇನೆ ಖುದ್ದಾಗಿ ಸ್ಥಳ ಪರಿಶೀಲನೆ ಮಾಡುತ್ತೇನೆಂದು. ಮತ್ತು ನಿರ್ಧಾಕ್ಷಿಣ್ಯವಾಗಿ ಕ್ರಮವನ್ನೂ ಸಹ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಇನ್ನು ಯಾವ ರೀತಿಯಲ್ಲಿ ಉತ್ತರವನ್ನು ಹೇಳುವುದು.

ಶ್ರೀ ಎಂ. ಶ್ರೀನಿವಾಸ್:– ನಾಳೆನೇ ಬೇಕಾದರೆ ಹೇಳಿ,

ಶ್ರೀ ರಮೇಶ್ ಸಿ ಜಿಗಜಿಣಗಿ:– ನಾನು ನಾಳೇನೇ ಸ್ಥಳ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ. ಎಕರೆಯಲ್ಲಿ ಸುಬ್ರಮಣ್ಯಪುರ ಪಂಚಾಯಿತಿಯಲ್ಲಿ ಅದನ್ನು ಸಹ ನಿಮಗೆ ಕೊಡುತ್ತೇನೆ.

ಬೆಂಗಳೂರು ನಗರದ ಕಾವಲ್‌ಬೈರಸಂದ್ರ ವಸತಿಗೃಹಗಳ ಸಮುಚ್ಚಯದಲ್ಲಿ ಕರ್ನಾಟಕ ಗೃಹ ಮಂಡಳಿಯವರು ಒಟ್ಟು 819 ಆರ್.ಹೆಚ್.ಎಸ್. ವಸತಿಗೃಹಗಳನ್ನು ನಿರ್ಮಿಸಿ, ಈ ವಸತಿಗೃಹಗಳನ್ನು ಹೇಗಿದೆಯೋ ಹಾಗೆ ಲೋಕೋಪಯೋಗಿ ಇಲಾಖೆಯ ವಶಕ್ಕೆ ನೀಡಲಾಗಿರುತ್ತದೆ. ಈ ವಸತಿಗೃಹಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1) ಬಂಗಲೆ ಮಾದರಿಯ ವಸತಿಗೃಹಗಳು	-	85
2) ಡ್ಯೂಪ್ಲೆಕ್ಸ್ ಮಾದರಿಯ ವಸತಿಗೃಹಗಳು	-	112
3)'ಸಿ' ಮಾದರಿಯ ವಸತಿಗೃಹಗಳು	-	152
ಒಟ್ಟು	-	349

ಇವುಗಳಲ್ಲಿ 100 ವಸತಿಗೃಹಗಳನ್ನು 1995-96ನೇ ಸಾಲಿನಲ್ಲಿ ದುರಸ್ಥಿಪಡಿಸಿ, ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ.

1) ಬಂಗಲೆ ಮಾದರಿಯ ವಸತಿಗೃಹಗಳು	-	44
2) ಡ್ಯೂಪ್ಲೆಕ್ಸ್ ಮಾದರಿಯ ವಸತಿಗೃಹಗಳು	-	40
3) 'ಸಿ' ಮಾದರಿ ವಸತಿಗೃಹಗಳು	-	16
ಒಟ್ಟು	-	100

ಬೆಂಗಳೂರು ಜಲಮಂಡಳಿಯು ಈ ವಸತಿ ಸಮುಚ್ಚಯಕ್ಕೆ ಆರು ಅಂಗುಲದ ಒಂದು ಕೊಳವೆ ಬಾವಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಇದಕ್ಕೆ ಒಂದು ಮೋಟರನ್ನು ಅಳವಡಿಸಲಾಗಿರುತ್ತದೆ. ಜಲಮಂಡಳಿಯು ಈ ವಸತಿಗೃಹ ಸಮುಚ್ಚಯಕ್ಕೆ ಬಲ್ಕ್ ಗೃಹಬಳಕೆ ದರದಂತೆ 1000 ಲೀಟರ್‌ಗೆ ರೂ. 3.50 ರಂತೆ ವಿಧಿಸಲಾಗುತ್ತಿದ್ದು, ಈ ದರವನ್ನು ಸಮನಾಗಿ ಹಂಚಿ ಪ್ರತಿ ಗೃಹದಿಂದ ರೂ. 50 ರಿಂದ 60 ರಂತೆ ವಸೂಲಿ ಮಾಡಲಾಗುತ್ತಿದೆ. ಸದರೀ ಬಿಲ್‌ನ್ನು ಜಲಮಂಡಳಿಯು ಲೋಕೋಪಯೋಗಿ ಇಲಾಖೆಗೆ ನೀಡುತ್ತಿದ್ದು, ಸದರಿ ವಸತಿಗೃಹದಲ್ಲಿ ವಾಸಿಸುತ್ತಿರುವುದರಿಂದ ಮೇಲಿನ ದರದಂತೆ ಬಿಲ್ಲನ್ನು ವಸೂಲಿ ಮಾಡಿ ಗೃಹ ಮಂಡಳಿಗೆ ಲೋಕೋಪಯೋಗಿ ಇಲಾಖೆಯೇ ಪಾವತಿ ಮಾಡುತ್ತಿದೆ.

ಈ ಸಮುದ್ಚಯದಲ್ಲಿ ಯಾರಿಗೂ ಅಕ್ರಮವಾಗಿ ವಾಸ ಮಾಡಲು ಅವಕಾಶ ನೀಡಿರುವುದಿಲ್ಲ. ಒಟ್ಟಾರೆ 349 ವಸತಿಗೃಹಗಳಲ್ಲಿ 100 ವಸತಿಗೃಹಗಳು ವಾಸಕ್ಕೆ ಯೋಗ್ಯವಾಗಿದ್ದು ಹಂಚಿಕೆ ಮಾಡಲಾಗಿರುತ್ತದೆ. 249 ವಸತಿಗೃಹಗಳು ವಾಸಯೋಗ್ಯಕ್ಕೆ ಅಪೂರ್ಣವಾಗಿದ್ದು, ದುರಸ್ಥಿ ಕೈಗೊಳ್ಳಲಾಗುತ್ತಿದೆ. ಈ ಅಪೂರ್ಣಗೊಂಡಿರುವ ವಸತಿಗೃಹಗಳು ಉಸ್ತುವಾರಿ ನೋಡಿಕೊಳ್ಳಲು ನೀರು ಸರಬರಾಜನ್ನು ಸಮರ್ಪಕವಾಗಿ ಸರಬರಾಜು ಮಾಡಲು ಸಿಬ್ಬಂದಿ ಹಾಗೂ ವಸತಿಗೃಹಗಳನ್ನು ಕಾಯಲು ಬೇಕಾಗಿರುವ ಕಾವಲುಗಾರರಿಗೆ ನಾಲ್ಕು ಅಪೂರ್ಣವಾಗಿರುವ ವಸತಿಗೃಹಗಳಲ್ಲಿ ತಾತ್ಕಾಲಿಕವಾಗಿ ಅವಕಾಶ ಮಾಡಿಕೊಡಲಾಗಿರುತ್ತದೆ. ಈ ವಸತಿಗೃಹಗಳ ಪೈಕಿ 'ಸಿ' ಮಾದರಿಯ ವಸತಿಗೃಹಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಂದ ನೀರಿನ ಬಿಲ್ಲನನು ಪಡೆಯಲಾಗುತ್ತಿಲ್ಲ.

ಪೂರಕವಾಗಿ ಕೊಳವೆ ಬಾವಿ ಮೂಲಕ ಪಡೆಯುತ್ತಿರುವ ನೀರನ್ನು ಜಲಮಂಡಳಿಯವರ ನೀರಿನ ಜೊತೆ ಹಂಚಿಕೆ ಮಾಡಲಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆದರಗಳನ್ನು ನಿವಾಸಿಗಳಿಂದ ಪಡೆಯಲಾಗುತ್ತಿಲ್ಲ.

ಶ್ರೀ ಎಂ.ಶ್ರೀನಿವಾಸ್:- ಸುಬ್ರಹ್ಮಣ್ಯಪುರ ಪಂಚಾಯಿತಿ..

ಉಪಾಧ್ಯಕ್ಷರು:- ಅದಾಯಿತು. ನೀವು ಅವರ ಆಫೀಸಿಗೆ ಹೋಗಿ ಎಲ್ಲಾ ಮಾಹಿತಿ ಕೊಡಿ. ನಾಳೆ ಉತ್ತರ ಕೊಡುತ್ತಾರೆ.

ಶ್ರೀ ರಮೇಶ್ ಸಿ ಜಿಗಜಿಣಗಿ:- ಅಧ್ಯಕ್ಷರೆ, ನಮಗೆ ಗೊತ್ತಿರುವುದಿಲ್ಲ. ಆದ್ದರಿಂದ ದಯವಿಟ್ಟು ಮಾನ್ಯ ಸದಸ್ಯರು ಕೊಡಲಿ. ಅವರ ಹತ್ತಿರ ಎಷ್ಟು ಇವೆಯೋ ಅಷ್ಟೂ ಸರ್ವೆನಂಬರ್ ಕೊಡಲಿ ನನ್ನ ಹತ್ತಿರ. ಎಲ್ಲವನ್ನೂ ನಾನು ಎನ್‌ಕ್ವೈರಿ ಮಾಡಿಸುತ್ತೇನೆ.